156 ಪ್ರಶ್ನೆ ಸಂ: 330 = (61)
LRR
1209

**<u>ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ</u> ಶ್ರೀ ರಾಮೋಜಿ ಗೌಡ ಇವರು ನಿಯಮ 330 ರಡಿ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಹೇಳಿಕೆ.**

## ವಿಷಯ

1997-98, 1998-99ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಗ್ರಾಮೀಣ ಕೃಪಾಂಕ ಮೀಸಲಾತಿಯಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ಸರ್ವೋಚ್ಚ ನ್ಯಾಯಾಲಯ ಹಾಗೂ ಸರ್ಕಾರದ ಆದೇಶದಂತೆ, ಗ್ರಾಮೀಣ ಕೃಪಾಂಕ ಹೊರತುಪಡಿಸಿ ಪರಿಷ್ಕರಿಸಿದ ಪಟ್ಟಿಯಲ್ಲಿ ಸ್ಥಾನ ಪಡೆಯದ ಅಭ್ಯರ್ಥಿಗಳನ್ನು 2003ರಲ್ಲಿ ಸೇವೆಯಿಂದ ವಜಾ ಮಾಡಲಾಗಿತ್ತು. ಈ ಹಿನ್ನಲೆಯಲ್ಲಿ ಗ್ರಾಮೀಣ ಕೃಪಾಂಕದಡಿಯಲ್ಲಿ ನೇಮಕಾತಿ ಹೊಂದಿ ನಂತರ ಬಿಡುಗಡೆ ಹೊಂದಿ ಮತ್ತೆ ಕರ್ತವ್ಯಕ್ಕೆ ಹಾಜರಾದ ಶಿಕ್ಷಕರ ಸೇವೆಯ ನಡುವಿನ ಅವಧಿಯನ್ನು, ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಗಳ ನಿಯಮ-117 ರನ್ವಯ, ಅಸಾಧಾರಣ ರಜೆ ಎಂದು ಪರಿಗಣಿಸಿ ಹಿಂದಿನ ಸೇವೆಯನ್ನು ಜೇಷ್ಠತೆ, ವೇತನ ಸಂರಕ್ಷಣೆ, ರಜೆ ಮತ್ತು ಪಿಂಚಣಿಗೆ ಪರಿಗಣಿಸಬೇಕು ಎಂದು ಸರ್ಕಾರವು ಆದೇಶಿಸಿದ್ದು, ಇದುವರೆಗೂ ಆ ಪ್ರಕ್ರಿಯೆ ಆಗದೆ ಉಳಿದಿದೆ. 2003ರಲ್ಲಿ ನೇಮಕಾತಿಗೊಂಡ ನಗರ ಅಭ್ಯರ್ಥಿಗಳಿಗೆ 1997-98 ರಿಂದಲೇ ಹಿಂದಿನ ಸೇವೆಯನ್ನು ಪರಿಗಣಿಸಿ ಆದೇಶವಾಗಿದ್ದು 1997-98, 1998-99ರಲ್ಲಿ ನೇಮಕಾತಿಗೊಂಡಿದ್ದು, ಐದು ವರ್ಷ ಸೇವೆ ಸಲ್ಲಿಸಿದರೂ ಕೂಡ ಸೇವೆಯನ್ನು ಪರಿಗಣಿಸದೆ ಇರುವುದು ಕೃಪಾಂಕ ನೌಕರರಿಗೆ ಮಾನಸಿಕವಾಗಿ ತುಂಬಾ ನೋವನ್ನು ತಂದಿದೆ. ಈಗಾಗಲೇ ನಿವೃತ್ತಿ ಹೊಂದಿರುವ ಗ್ರಾಮೀಣ ಕೃಪಾಂಕ ಶಿಕ್ಷಕರಿಗೆ ಅತ್ಯಂತ ಕಡಿಮೆ ಪಿಂಚಣಿ ನಿಗದಿಯಾಗುತ್ತಿರುವುದರ ಬಗ್ಗೆ ಸದನದಲ್ಲಿ ನಿಯಮ 330 ರಡಿ ಚರ್ಚಿಸಲು ಅವಕಾಶ ನೀಡುವಂತೆ ಈ ಮೂಲಕ ಕೋರಿದೆ.

## ಉತ್ತರ

ಗ್ರಾಮೀಣ ಕೃಪಾಂಕ ಸೌಲಭ್ಯ ಪಡೆದು ನೇಮಕಗೊಂಡ ಅಭ್ಯರ್ಥಿಗಳ ನೇಮಕಾತಿಗೆ ಸಂಬಂಧಿಸಿದಂತೆ, ಸರ್ವೋಚ್ಚ ನ್ಯಾಯಾಲಯವು ದಿನಾಂಕ: 06.05.2003 ರಂದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಸಂಬಂಧ ಹೊರಡಿಸಲಾದ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 45 ಸೇನೆನಿ 2003, ದಿನಾಂಕ 02.07.2003ರಲ್ಲಿನ ಸೂಚನಾಂಶಗಳು ಕೆಳಗಿನಂತಿವೆ:-

1. ದಿನಾಂಕ:11.11.1998 ರ ನಂತರ ಗ್ರಾಮೀಣ ಕೃಪಾಂಕ ಸೌಲಭ್ಯದೊಂದಿಗೆ ನೇಮಕಾತಿ (Appointment) ಹೊಂದಿರುವ ಎಲ್ಲಾ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಗ್ರಾಮೀಣ ಕೃಪಾಂಕ ರಹಿತವಾಗಿ ಪರಿಷ್ಕರಿಸಿ, ಪರಿಷ್ಕೃತ ಆಯ್ಕೆ ಪಟ್ಟಿಗಳನ್ನು ಪ್ರಕಟಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

2. ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆಯಲಾಗದ ಅಭ್ಯರ್ಥಿಗಳನ್ನು ಸೇವೆಯಿಂದ ತೆಗೆದು ಹಾಕಲು ಕ್ರಮ ತೆಗೆದುಕೊಳ್ಳತಕ್ಕದ್ದು.

3. ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಹೊಸದಾಗಿ ಸೇರ್ಪಡೆಯಾದ ಅಭ್ಯರ್ಥಿಗಳನ್ನು ಸೇವೆಯಿಂದ ತೆಗೆದುಹಾಕಿದ ಅಭ್ಯರ್ಥಿಗಳ ಸ್ಥಾನದಲ್ಲಿ ಭವಿಷ್ಯವರ್ತಿಯಾಗಿ ಜಾರಿಗೆ ಬರುವಂತೆ ನೇಮಕಾತಿ ಮಾಡಲು ಕ್ರಮ ತೆಗೆದುಕೊಳ್ಳತಕ್ಕದು.

ದಿನಾಂಕ 02.07.2003 ಸರ್ಕಾರದ ಸುತ್ತೋಲೆ ಆಧರಿಸಿ ಗ್ರಾಮೀಣ ಕೃಪಾಂಕ ಸಹಿತವಾಗಿ ನೇಮಕಾತಿಯಾದವರನ್ನು ನಿಯಮಾನುಸಾರ ಸೇವೆಯಿಂದ ವಜಾಗೊಳಿಸಲಾಯಿತು.

ತದನಂತರ ಭಾರತದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಗ್ರಾಮೀಣ ಕೃಪಾಂಕ ರಹಿತವಾಗಿ ನೇಮಕಾತಿಗೆ ಪರಿಗಣಿಸಲು ಅರ್ಹತೆ ಇಲ್ಲದೇ ವಜಾಗೊಂಡ ನೌಕರರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 58 ಎಸ್‌ಆರ್‌ಆರ್ 2003, ದಿನಾಂಕ 12.11.2003ರ ಪ್ರಕಾರ ಮಾನವೀಯ ನೆಲೆಯ ಆಧಾರದಲ್ಲಿ ಒಂದು ಬಾರಿಯ ಕ್ರಮವಾಗಿ ಪುನಃ ಸೇವೆಗೆ ತಗೆದುಕೊಳ್ಳಲು ಅವಕಾಶ ಕಲ್ಪಿಸಿದ್ದು, ಸದರಿ ವಿಶೇಷ ನಿಯಮಗಳ 4ನೇ ನಿಯಮದಲ್ಲಿ ಪ್ರಸ್ತಾಪಿತ ಎಲ್ಲ ಅಭ್ಯರ್ಥಿಗಳ ರಜೆ, ಸೇವಾ ಜೇಷ್ಠತೆ ವೇತನ ಮತ್ತು ನಿವೃತ್ತಿ ವೇತನಗಳ ಬಗ್ಗೆ ಕೆಳಗಿನಂತೆ ಸ್ಪಷ್ಟಪಡಿಸಲಾಗಿದೆ:-

**4. Leave, seniority, pay and Pension of the person absorbed:-**

**1)** The service rendered by the persons absorbed under these rules prior to the date of such absorption shall be taken into consideration for determining their leave and pension but **shall not be considered for the purpose of pay and seniority.**

2) the pay of the absorbed persons shall be fixed at minimum of the time scale of pay of the post to which they are absorbed.

ಮೇಲಿನ ವಿಶೇಷ ನಿಯಮಾವಳಿಯಲ್ಲಿ ಗ್ರಾಮೀಣ ಕೃಪಾಂಕ ಸಹಿತವಾಗಿ ನೇಮಕಾತಿ ಹೊಂದಿ ಸಲ್ಲಿಸಿರುವ ಸೇವೆಯನ್ನು ಪಿಂಚಣಿ ಮತ್ತು ರಜೆ ಸೌಲಭ್ಯಗಳಿಗೆ ಮಾತ್ರ ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಯುಕ್ತ, ಸರ್ಕಾರದ ಆದೇಶಾನುಸಾರ ಇಲಾಖಾ ಹಂತದಲ್ಲಿ ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ: ಇಪಿ 112 ಪಿಎಂಎ 2025**

(**ಎಸ್. ಮಧುಬಂಗಾರಪ್ಪ**)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು